

ಅಂದರೆ 'ಫ್ಯಾಟ್'. ಆಂಗ್ಲ ಭಾಷೆಯ ಫ್ಯಾಟ್ ಅಂದರೆ ಕೊಬ್ಬು ಎಂದರ್ಥ. ಈ ಹಬ್ಬದಲ್ಲೂ ಕೊಬ್ಬುಭರಿತ ಊಟಕ್ಕೆ ಪ್ರಾಧಾನ್ಯತೆ. ಇದೇ ಕಾರಣದಿಂದ ಮಾರ್ಡಿಗ್ರಾಸ್ ಹಬ್ಬವನ್ನು 'ಫ್ಯಾಟ್ ಟ್ಯೂಸ್‌ಡೇ' ಎಂದೂ, 'ಶ್ರೋವ್ ಟ್ಯೂಸ್‌ಡೇ' ಎಂದೂ ಕರೆಯುತ್ತಾರೆ.

ಇಡೀ ಹಬ್ಬದ ಆಕರ್ಷಣೆಯೇ ಸಂಭ್ರಮದ ಮೆರವಣಿಗೆ. ನೂರಾರು ಚಿತ್ರವಿಚಿತ್ರ ದೃಶ್ಯಗಳು ಈ ಮೆರವಣಿಗೆಯಲ್ಲಿ ಕಂಡವು. ರಸ್ತೆಯಲ್ಲಿ ಹಾದುಹೋಗುವ ಪ್ರತಿಯೊಂದು ದೃಶ್ಯದ ಹಿಂದೆಯೂ ಜನರು ಸಾಕಷ್ಟು ಪರಿಶ್ರಮ ಪಟ್ಟಿರುವುದು ಸ್ಪಷ್ಟವಾಗಿ ಕಂಡಿತು.

ಅಂದ ಹಾಗೆ ಈ ಮೆರವಣಿಗೆ ಒಂದು ದಿನಕ್ಕಷ್ಟೇ ಸೀಮಿತವಾಗಿರುವುದಿಲ್ಲ. ಡಿಸೆಂಬರ್ ಮೂರನೇ ವಾರದಿಂದ ಆರಂಭಗೊಂಡು, ಫೆಬ್ರವರಿಯ ಕೊನೆಯ ವಾರದ ತನಕವೂ ಮೆರವಣಿಗೆಗಳು ನಡೆಯುತ್ತವೆ. ವೇಷಧಾರಿಗಳು ವೈವಿಧ್ಯಮಯ ವಸ್ತು ವಿಷಯಗಳನ್ನು ವೇಷಭೂಷಣದ ಮೂಲಕವೇ ಪ್ರಸ್ತುತ ಪಡಿಸುತ್ತಾರೆ. ದೇಶದ ವಿವಿಧ ಶಾಲೆಗಳ ನೂರಾರು ಮಕ್ಕಳೂ ಮೆರವಣಿಗೆ- ಯಲ್ಲಿ ಭಾಗವಹಿಸುತ್ತಾರೆ. ಈ ಹಬ್ಬದಲ್ಲಿ ಭಾಗವಹಿಸುವುದು ಮಕ್ಕಳಿಗೂ ಪ್ರತಿಷ್ಠೆಯ ವಿಷಯ. ಈ ಮೆರವಣಿಗೆಯಲ್ಲಿ ಭಾಗವಹಿಸುವುದಕ್ಕಾಗಿಯೇ ಶಾಲಾ ಮಕ್ಕಳು ಮತ್ತು ಜನರು ಎರಡರಿಂದ ಮೂರು ತಿಂಗಳ ಕಾಲ ಪೂರ್ವತಯಾರಿ ನಡೆಸಿರುತ್ತಾರೆ.

ಮೆರವಣಿಗೆಯ ಜತೆಗೆ ಹೆಜ್ಜೆ ಹಾಕುತ್ತಾ ನಡೆದರೆ, ಸುಮಾರು ಎರಡರಿಂದ ಮೂರು ಕಿ.ಮೀ ಉದ್ದಕ್ಕೂ ಮೆರವಣಿಗೆ ಸಾಗಿತ್ತು! ಬೃಹತ್ ಸ್ತಬ್ಧಚಿತ್ರಗಳು, ವಿವಿಧ ಗಾತ್ರದ ಕನ್ನಡಕಗಳು, ದೊಡ್ಡದಾದ ರಥ ಅಥವಾ ಟ್ರಕ್‌ನಲ್ಲಿ ರಾಜ-ರಾಣಿ ವೇಷಧಾರಿಯರು, ಸೈನಿಕರ ವೇಷ ಧರಿಸಿ ಕವಾಯತು ಮಾಡುವವರು.. ಹೀಗೆ ಮೆರವಣಿಗೆಯ ಉದ್ದಕ್ಕೂ ವೈವಿಧ್ಯಮಯ ನೋಟಗಳು! ದಾರಿಯಲ್ಲಿ ಮೆರವಣಿಗೆ ಹಾದುಹೋಗುವಾಗ ಅಕ್ಕಪಕ್ಕದಲ್ಲಿ ನಿಂತು ನೋಡುವ ಪ್ರೇಕ್ಷಕರತ್ತ ವೇಷಧಾರಿಗಳು ಉಡುಗೊರೆಗಳನ್ನು ಎಸೆಯುವುದೂ ನಡೆಯುತ್ತದೆ. ಉಡುಗೊರೆಗಳಾಗಿ ಮಣಿಸರಗಳು, ಮೆರವಣಿಗೆಯನ್ನು ಬಿಂಬಿಸುವ ಪದಕ-ಗಳನ್ನು ವೀಕ್ಷಕರಿಗೆ ನೀಡುತ್ತಾರೆ. ಮಕ್ಕಳಿಗೆ ಗೊಂಬೆ, ಟೋಪಿ ಮತ್ತು ಆಟದ ಸಾಮಾನುಗಳನ್ನು ಉಡುಗೊರೆಯಾಗಿ ನೀಡುತ್ತಿದ್ದುದು ಕಂಡು ಬಂತು.

ಮೆರವಣಿಗೆಗಳೂ ಒಂದೇ ರೀತಿ ಇರುವುದಿಲ್ಲ. ಪ್ರತೀ ದಿನದ ಮೆರವಣಿಗೆಗೂ ಒಂದೊಂದು ಹೆಸರನ್ನು ಇಡಲಾಗುತ್ತದೆ. ಆಯಾ ದಿನದ ಮೆರವಣಿಗೆಗೆ ಒಂದೊಂದು ಥೀಮ್ ಇರುತ್ತದೆ. ಮೆರವಣಿಗೆಯನ್ನು ನೋಡಲು ಮತ್ತು ಅದರಲ್ಲಿ ಭಾಗವಹಿಸಲು ಅಮೆರಿಕದ ವಿವಿಧ ರಾಜ್ಯಗಳಿಂದ ಬರುವ ಜನರು ಆಯಾ ದಿನದ ಥೀಮ್ ಅನ್ನು ತಿಳಿದುಕೊಂಡು ತಮಗೆ ಇಷ್ಟವಾಗುವ ವಿಷಯಗಳ ದಿನದಂದೇ ಬರುವುದೂ ಇದೆ. ಮೆರವಣಿಗೆ ಬರುವುದಕ್ಕೆ ಎಷ್ಟೋ ಗಂಟೆಗಳ ಮುಂಚೆಯೇ ಬೀದಿಯ ಇಕ್ಕೆಲಗಳೂ ಜನರಿಂದ ಭರ್ತಿಯಾಗಿರುತ್ತವೆ.

ಸರಿಸುಮಾರು ಮೂರು ತಿಂಗಳ ಕಾಲ ಮೆರವಣಿಗೆಗಳು ನಡೆದರೂ, ಜಾತ್ರೆಯ ಕೊನೆಯ ಮೂರು ದಿನದ ಮೆರವಣಿಗೆಗಳೇ ಹೆಚ್ಚು ಜನಾಕರ್ಷಕ. ಈ ಕಾರಣದಿಂದಲೇ ಕೊನೆಯ ಮೂರು ದಿನದಲ್ಲಿ ಇಲ್ಲಿ ಲಕ್ಷಗಟ್ಟಲೆ ಜನ ಬಂದು ಸೇರುತ್ತಾರೆ. ನಾವು ಹೋದ ದಿನ ಸೇರಿದ ಲಕ್ಷಾಂತರ ಜನರನ್ನು ನೋಡಿದಾಗ ನನಗೆ ಮೈಸೂರು ದಸರಾ ಮೆರವಣಿಗೆಯ ನೆನಪಾಯಿತು.

ಕೊನೆಯ ದಿನದ ಮೆರವಣಿಗೆಯಲ್ಲಿ ಆಫ್ರೊ ಅಮೆರಿಕನ್ ಜನರ 'ಜುಲು' ವೇಷಧಾರಿಗಳ ಕುಣಿತ ಗಮನ ಸೆಳೆಯಿತು. ಇಂಡೊ ಅಮೆರಿಕನ್ ಮೂಲದ 'ರೆಕ್ಸ್' ವೇಷಧಾರಿಗಳೂ ದೊಡ್ಡ ಸಂಖ್ಯೆಯಲ್ಲಿದ್ದರು. ಅಮೆರಿಕದಲ್ಲಿ ನೆಲೆಸಿರುವ ಅನಿವಾಸಿ ಭಾರತೀಯರೂ ತಮ್ಮ ಸಂಸ್ಕೃತಿ ಮತ್ತು ಕಲೆಗಳನ್ನು ಬಿಂಬಿಸುವ ವೇಷಧಾರಿಗಳಾಗಿ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಒಟ್ಟಾರೆ ಇಡೀ ದೇಶದ ವೈವಿಧ್ಯಮಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಈ ಹಬ್ಬ ಮತ್ತು ಮೆರವಣಿಗೆಗಳು ಜನರಲ್ಲಿ ದುಡಿಯುವ ಜೀವನೋತ್ಸಾಹವನ್ನೂ ಹೆಚ್ಚಿಸುತ್ತದೆ ಎನ್ನುವುದು ಸುಳ್ಳಲ್ಲ.